# ಮೆಟ್ರೋ ಎಂಬ ಚಲಿಸುವ ಪುಣ್ಯಸ್ಥಳ

ಸುಧಾ ಯುಗಾದಿ ಪ್ರಬಂಧ ಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದ ಪ್ರಬಂಧ

■ ಶ್ರೀನಿಧಿ ಡಿ.ಎಸ್.

ಮೊದಲ ಬಾರಿಗೆ ಮುಂಬೈ ನಗರಕ್ಕೆ ಹೋಗಿದ್ದಾಗ ಅಲ್ಲಿನ ರೈಲು ಜಾಲವನ್ನು ನೋಡಿ ಹೊಟ್ಟೆ ಉರಿದುಕೊಂಡಿದ್ದೆ. ಎಲ್ಲಿಂದ ಎಲ್ಲಿಗೆ ಬೇಕಾದರೂ ಲೀಲಾಜಾಲವಾಗಿ ಹೋಗಬಹುದಾದ ರೈಲ್ವೇ ವ್ಯವಸ್ಥೆ ಅಲ್ಲಿಯದು. ಬೆಳಗ್ಗೆ ಸಂಜೆಯ ನೂಕುನುಗ್ಗಲುಗಳನ್ನು ಹೊರತುಪಡಿಸಿದರೆ, ಟ್ರಾಫಿಕ್ ಜಾಮಿನ ಕಿರಿಕಿರಿ ಇಲ್ಲದೇ ಆರಾಮಾಗಿ ಪ್ರಯಾಣಿಸುವ ಸೌಭಾಗ್ಯ ಅಲ್ಲಿನ ಮಂದಿಗೆ ಎಂದು ನನಗೆ ಹೊಟ್ಟೆಕಿಚ್ಚೇ ಆಗಿತ್ತು. ಯಾಕೆಂದರೆ ನಾನು ಬೆಂಗಳೂರು ಮಹಾನಗರಿಯಲ್ಲಿ ಓಡಾಡಿ ಕೊಂಡಿರುವವನು. ಇಲ್ಲಿನ ರಸ್ತೆ ಕ್ರೋಧದ ಬಗ್ಗೆ ಹೇಳಿ ಪ್ರಯೋಜನವಿಲ್ಲ. ಅನುಭವಿಸಿದವರಿಗೆ ವಿವರಣೆಯ ಅಗತ್ಯವಿಲ್ಲ, ಅನುಭವಿಸದೇ ಇರುವವರಿಗೆ ಅರ್ಥವಾಗುವುದಿಲ್ಲ. ಇಲ್ಲಿನ ಟ್ರಾಫಿಕ್ಕಿನ ಹೊಡೆತಕ್ಕೆ ಹೈರಾಣಾಗಿದ್ದ ನನಗೆ, ಅಪರೂಪಕ್ಕೆ ನೋಡಿದ ಬೊಂಬಾಯಿ ರೈಲುಗಳು ಚಂದ ಕಂಡಿದ್ದವು. ಮುಂಬೈ ರೈಲ್ವೇ ವ್ಯವಸ್ಥೆಯನ್ನೇ ನೋಡಿಯೇ ನನ್ನ ಹಣೇಬರಹ ಹಳಿದುಕೊಂಡಿದ್ದ ನಾನು ದೆಹಲಿಯ ಮೆಟ್ರೋ ನೋಡಿದ ಮೇಲಂತೂ ಜನುಮವೇ ವ್ಯರ್ಥ ಎಂಬ ತೀರ್ಮಾನಕ್ಕೆ ಬಂದಿದ್ದೆ. ಹವಾನಿಯಂತ್ರಿತ ಬೋಗಿಗಳೂ, ಸ್ವಚ್ಛ ರೈಲು ನಿಲ್ದಾಣಗಳು, ಶಿಸ್ತಿನ ವ್ಯವಸ್ಥೆ, ಸದ್ದೇ ಇಲ್ಲದೇ ಸಾಗಿ ಹೋಗುವ ರೈಲುಗಳನ್ನೂ ನೋಡಿ ಬೆಂಗಳೂರಿನ ನಸೀಬನ್ನೂ ನನ್ನ ಗ್ರಹಚಾರವನ್ನೂ ಆಡಿಕೊಂಡು ಸುಮ್ಮನಾಗಿದ್ದಾಗಿತ್ತು. ಇಲ್ಲಿಯೂ ಅದೇನೋ ಮೆಟ್ರೋ ಇವತ್ತು ಶುರು ನಾಳೆ ಶುರು ಎಂಬ ಮಾತು ವರುಷಗಟ್ಟಲೆಯಿಂದ ಕೇಳಿಕೊಂಡು ಬಂದಿದ್ದು ಹೌದಾದರೂ, ಅದರ ಲಕ್ಷಣವೇನೂ ಇರಲಿಲ್ಲ ಕೂಡ. ಸಿಟಿಯ ತುಂಬ ಅಗೆದಿಟ್ಟ ಹೊಂಡಗಳೂ, ಅರೆಬರೆ ನಿಂತ ಕಂಬಗಳೂ ನಮ್ಮ ದೈನಿಕದ ಭಾಗವಾಗಿದ್ದವು. ಮುಂದೆ ಅದ್ಯಾವ ಕಾಲದಲ್ಲೋ ಆಗತ್ತೆ ಬಿಡು ಎಂಬ ಉಡಾಫೆಯಲ್ಲಿಯೇ ನಾನೂ ಇದ್ದೆ.

ಆದರೆ ಕೊನೆಗೊಂದು ದಿನ, ಬೆಂಗಳೂರಿನಲ್ಲೂ ಮೆಟ್ರೋ ಆರಂಭ ಎನ್ನುವ ಗೌಜು ಕೇಳಿಬಂತು. ಆದರೆ ಅಲ್ಲೂ, ತುಂಬ ವಿಶೇಷ ಬದಲಾವಣೆ ಏನೂ ಆಗಲಿಲ್ಲ. ಪ್ರಯೋಗಾರ್ಥವಾಗಿ ಇದ್ದ ಹಾಗೆ, ಕೇವಲ ಒಂದು ಪುಟ್ಟ ದೂರವನ್ನು ಮಾತ್ರ ಕ್ರಮಿಸುವ ಆ ತುಂಡು ಪಯಣ ನನಗಂತೂ ಯಾವ ಲಾಭವನ್ನೂ ಮಾಡಿರಲಿಲ್ಲ.ಅದೂ ಅಲ್ಲದೇ ಅದೊಂದು ಚಲಿಸುವ ಝೂನಂತೆ ಕಾಣಿಸುತ್ತಿತ್ತು ಬೇರೆ.ಕೆಲಸ ಕಾರ್ಯಗಳಿಗೆಗಾಗಿ ಪ್ರಯಾಣ ಮಾಡುವವರಿಗಿಂತ, ಮೆಟ್ರೋದ ಅಂದ ಚಂದ ನೋಡಲು ಬರುವವರೇ ಜಾಸ್ತಿ! ಮದುವೆ ಮನೆಯಲ್ಲಿ ಆಕಡೆ ಈ ಕಡೆ ಲಕಲಕ ಓಡಾಡುವವರ ಹಾಗೆ ರೈಲು ತುಂಬ ಅದರ ಕಂಬ ಬಾಗಿಲು ಮುಟ್ಟಿ ನೋಡುತ್ತ ಸೆಲ್ಫೀ ತೆಗೆದುಕೊಳ್ಳುತ್ತ ಓಡಾಡುವವರ ಸಂಖ್ಯೆಯೇ ಹೆಚ್ಚು. ಊರಿಂದ ಬಂದ ಅಜ್ಜ, ಅಜ್ಜಿ ಅಪ್ಪ ಅಮ್ಮಂದಿರನ್ನ ಪ್ರಾಯಶಃ ಅರ್ಧಕ್ಕರ್ಧ ಬೆಂಗಳೂರಿನ ಮಂದಿ ಕರೆದುಕೊಂಡು ಬಂದು ತೋರಿಸುವ ಪ್ರೇಕ್ಷಣೀಯ ಸ್ಥಳವಾಗಿ ಹೋಗಿತ್ತು ಎಂಜೀ ರೋಡಿನ ಮೆಟ್ರೋ ನಿಲ್ದಾಣ, ಪಾಪ! ಇನ್ನೇನು ಅದನ್ನು ಯುನೆಸ್ಕೋ ವಿಶ್ವ ಪರಂಪರೆಯ ಪ್ರವಾಸ ತಾಣಗಳ ಪಟ್ಟಿಗೆ ಸೇರಿಸುತ್ತದೆಯೇನೋ ಎನ್ನುವ ಹೊತ್ತಿಗೆ ಪೂರ್ಣ ಪ್ರಮಾಣದ ಸಂಚಾರ ಆರಂಭವಾಯಿತು, ಪುಣ್ಯ! ಬಹಿರಂಗ ಪ್ರದರ್ಶನ ಮುಗಿದು, ಅಂತರಂಗ ದರ್ಶನ ಶುರುವಾಗಿದ್ದು ಹೀಗೆ.

ನಾನು ಮೆಟ್ರೋದಲ್ಲೀಗ ನಿತ್ಯ ಪಯಣಿಗ. ನನ್ನ ಮನೆಯೂ, ಆಫೀಸೂ ಮೆಟ್ರೋ ಸ್ಟೇಷನ್ನುಗಳ ಸಮೀಪವೇ ಇರುವುದರಿಂದ ಅದೀಗ ನನ್ನ ದಿನಚರಿಯ ಜೊತೆಗೆ ಸೇರಿಕೊಂಡಿವೆ. ಬೆಂಗಳೂರು ನಗರದ ಬೇರೆ ಬೇರೆ ತುದಿಗಳನ್ನು ಸೇರಿಸುವ ಈ ಸಂಚಾರ ಜಾಲದ ಭಾಗವೇ ನಾನೂ ಆಗಿದ್ದೇನೆ. ಹೊಸ ಕೆಲಸವೊಂದಕ್ಕೆ ಸೇರಿಕೊಂಡು ನಿತ್ಯವೂ ಇಪ್ಪತ್ತಿಪ್ಪತ್ತು ಕಿಲೋಮೀಟರು ಕಾರಲ್ಲಿ ಹೋಗಿ ಬರಬೇಕಾದ ಪರಿಸ್ಥಿತಿ ನನ್ನದಾಗಿತ್ತು. ಅದೇ ತಿಂಗಳೊಪ್ಪತ್ತಲ್ಲೇ ಶುರುವಾದ ಮೆಟ್ರೋ, ಬೀಪಿ ಶುಗರುಗಳೂ ಅವುಗಳ ಜೊತೆಗೆ ಉಚಿತವಾಗಿ



ಚಿತ್ರ: ಮೋನಪ್ಪ